ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

ಸಂಖ್ಯೆ : ವಾಇ : ಉ ನಿ : ಸುಮಪ : 2014–15 : ಜನವರಿ 14, 2015

## ಮಕರ ಸಂಕ್ರಾಂತಿ : ರಾಜ್ಯದ ಜನತೆಗೆ ಮುಖ್ಯಮಂತ್ರಿ ಶುಭಾಶಯ




ಬೆಂಗಳೂರು, ಜನವರಿ 14:

ಮಕರ ಸಂಕ್ರಾಂತಿ ಹಬ್ಬದ ಸಂದರ್ಭದಲ್ಲಿ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ರಾಜ್ಯದ ಜನತೆಗೆ ಶುಭ ಹಾರೈಸಿದ್ದಾರೆ.

ಎಳ್ಳು ಬೆಲ್ಲದ ಬಗೆ ಬಗೆಯ ಮಿಶ್ರಣ, ಸಕ್ಕರೆ ಅಚ್ಚು ಸೊಗಸಾದ ಕಬ್ಬು ಹಾಗೂ ಜೊತೆಗೆ ಅಕ್ಕರೆಯ ಸಕ್ಕರೆ ಪೊಂಗಲ್ ಇವೆಲ್ಲವನ್ನೂ ಸವಿಯುವ ಸುಗ್ಗಿಯ ಹಿಗ್ಗಿನ ಸಂಕ್ರಾಂತಿ ರೈತರ ಹಬ್ಬವಾಗಿದೆ. *ಎಳ್ಳು ಬೆಲ್ಲ ತಿಂದು ಒಳ್ಳೆಯ ಮಾತಾಡು* ಎಂಬ ಹಿರಿಯರ ಸವಿನುಡಿ ಹಬ್ಬದ ಸಂದರ್ಭದಲ್ಲಿ ಕಿರಿಯರಿಗೆ ಹಿತನುಡಿಯಾಗಿದೆ. ಅವರೆ ಕಾಯಿ, ಅರಿಶಿನ, ಕಡಲೆ ಕಾಯಿ, ಗೆಣಸು ಎಲ್ಲವೂ ಹೇರಳವಾಗಿ ದೊರೆಯುವ ಈ ಸುಸಂದರ್ಭ ಬಹುಜನರ ಪಾಲಿಗೆ ಸಂಭ್ರಮದ ಆಹಾರೋತ್ಸವೇ ಆಗಿರುತ್ತದೆ. ಅನ್ನವಿಲ್ಲದವರಿಗೆ ಅನ್ನ ನೀಡಿ ಹಾಗೂ ವಸ್ತ್ರವಿಲ್ಲದವರಿಗೆ ವಸ್ತ್ರ ನೀಡಿ, ನಾವೆಲ್ಲರೂ ಸಂಕ್ರಾಂತಿಯನ್ನು ಸಡಗರ ಮತ್ತು ಸಂಭ್ರಮದಿಂದ ಆಚರಿಸೋಣ ಎಂದು ಶ್ರೀ ಸಿದ್ದರಾಮಯ್ಯ ಅವರು ತಮ್ಮ ಸಂದೇಶದಲ್ಲಿ ತಿಳಿಸಿದ್ದಾರೆ.

************

ಡಿ ಪಿ ಎಂ